## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂ:**182/2016** ಸಿ.ಡಬ್ಲ್ಯೂ –2 ಪಿ.ಡಬ್ಲೂ-೨

| | | |
|---|---|---|
| ಹೆಸರು | ಃ | ಸುರೇಶ |
| ತಂದೆಃ | ಃ | ಜಯವಂತರಾವ |
| ವ ಯಸ್ಸು | ಃ | ೬೪ ವರ್ಷ |
| ಉದ್ಯೋಗ | : | ನಿವೃತ್ತ ವಿಶೇಷ ಸಹಾಯಕ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ೦೯.೦೧.೨೦೨೦

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 2010 ಜೂನ್ ರಿಂದ 2012 ನವೆಂಬರ್ ವರೆಗೆ ವಿಶೇಷ ಸಹಾಯಕನಾಗಿ ಕಡಗಂಚಿ ಎಸ್.ಬಿ.ಐ. ನಲ್ಲಿ ಕೆಲಸ ಮಾಡಿರುತ್ತೇನೆ. ಚಾಸಾ-1, 18, 19 20, 21, 23 ರವರ ಪರಿಚಯ ಇರುತ್ತದೆ. ಆರೋಪಿಗಳನ್ನು ನಾನು ನೋಡಿರುವ ನೆನಪಿಲ್ಲ.

ದಿನಾಂಕ:12.10.2012 ರಂದು ರಾತ್ರಿ ಸಮಯದಲ್ಲಿ ಕಳ್ಳತನ ಆಗಿತ್ತು. ದಿನಾಂಕ: 13.10.2012 ರಂದು ನಾನು ಬೆಳಿಗ್ಗೆ 9.45 ಗಂಟೆಗೆ ವ್ಯವಸ್ಥಾಪಕರೊಂದಿಗೆ ಬ್ಯಾಂಕಿಗೆ ಹೋದೆವು. ನಾವು ಹೋಗಿ ಕೀಲಿ ತೆಗೆದೆವು, ಹೋದ ತಕ್ಷಣ ಒಳಗೆ ಬೆಳಕು ಕಾಣಿಸಿತು, ಗೋಡೆ ಮತ್ತು ಬಲ್ಬುಗಳು ಒಡೆದಿರುವುದು ಕಂಡು ಬಂತು. ನಂತರ ನಮ್ಮ ವ್ಯವಸ್ಥಾಪಕರು ಪೋಲಿಸರು ಬರುವವರೆಗೆ ನಮಗೆ ಒಳಗೆ ಬರಬೇಡಿ ಎಂದು ಹೇಳಿದರು, ಅದರಂತೆ ನಾವು ಹೊರಗಡೆ ಬಂದೆವು. ವ್ಯವಸ್ಥಾಪಕರು ಪೋಲಿಸರಿಗೆ ದೂರನ್ನು ಸಲ್ಲಿಸಿದರು. ಹಾಗೂ ನಮ್ಮ ಮೇಲಾಧಿಕಾರಿಗಳಿಗೂ ಸಹ ಸೂಚನೆಯನ್ನು ಕೊಟ್ಟೆವು. ಸ್ವಲ್ಪ ಸಮಯದ ನಂತರ ನರೋಣಾ ಪೋಲಿಸರು ಬಂದರು, ನಾಯಿಗಳನ್ನು ಕರೆದುಕೊಂಡು ಪರೀಕ್ಷೆ ಮಾಡಿದರು. ನಂತರ ನನ್ನನ್ನು ಮತ್ತು ವ್ಯವಸ್ಥಾಪಕರನ್ನು ಕರೆದು ಕೀಲಿ ತೆಗೆಯುವಂತೆ ಹೇಳಿದರು. ಕೀಲಿ ತೆಗೆದ ನಂತರ ಒಳಗಡೆ ಬಂಗಾರ ಮತ್ತು ನಗದು ಹಣ ಕಳ್ಳತನವಾಗಿದ್ದ ಬಗ್ಗೆ ಗೊತ್ತಾಯಿತು. ಸುಮಾರು ರೂ.46,40,000/- ಚಿಲ್ಲರೆ ಹಣ ಕಳ್ಳತನವಾಗಿತ್ತು. ಮತ್ತು ಒತ್ತೆ ಇಟ್ಟ 4500 ಗ್ರಾಂ. ಬಂಗಾರ ಸಂಪೂರ್ಣವಾಗಿ ಕಳ್ಳತನವಾಗಿತ್ತು.

ಸುಮಾರು ಒಂದುನ ವರ್ಷದ ನಂತರ ಎಂ.ಬಿ.ನಗರ ಪೋಲಿಸರು ನನ್ನನ್ನು ಮತ್ತು ವ್ಯವಸ್ಥಾಪಕರನ್ನು ಕಲಬುರಗಿಗೆ ಕರೆಸಿದರು. ಆಗ ಅವರು ನಮಗೆ ನಮ್ಮ ಬಂಗಾರವನ್ನು ಕರಗಿಸಿ ಮಾಡಿದ ಗಟ್ಟಿ ಬಂಗಾರ ಮತ್ತು

ದಸ್ತಗಿರಿ ಮಾಡಿ ಕಳ್ಳರನ್ನು ಹಾಗೂ ಹಣವನ್ನು ಸಹ ತೋರಿಸಿದರು. 2014 ರಲ್ಲಿ ನಮಗೆ ಬಂಗಾರವನ್ನು ತೋರಿಸಿದ್ದು, ನಾನು ಈಗ ನಿವೃತ್ತಿಯಾಗಿದ್ದು, ಆಗ ತೋರಿಸಿದ ಬಂಗಾರವನ್ನು ಈಗ ನನಗೆ ಗುರುತಿಸಲು ಆಗುವುದಿಲ್ಲ. ಮತ್ತೆ ಅದೇ ವರ್ಷದಲ್ಲಿ ಸದರಿ ಎಂ.ಬಿ. ನಗರ ಪೋಲಿಸರು ನಮ್ಮನ್ನು ಕರೆಯಿಸಿ ಬೇರೆ ಕಳ್ಳರನ್ನು ಮತ್ತು ಬಂಗಾರವನ್ನು ಹಾಗೂ ಹಣವನ್ನು ಸಹ ತೋರಿಸಿದರು. ನಾನು ಮತ್ತೆ ಎಂ.ಬಿ ನಗರ ಪೋಲಿಸ್ ಠಾಣೆಗೆ ಹೋಗಿಲ್ಲ. ನ್ಯಾಯಾಲಯದ ಸಮಕ್ಷಮ ಇರುವ ಆರೋಪಿತರನ್ನು ಸಾಕ್ಷಿಗೆ ತೋರಿಸಲಾಗಿ ಅವರು ಆರೋಪಿತರನ್ನು ನೋಡಿ ನಾನು ನಿವೃತ್ತಿಯಾಗಿ 4 ವರ್ಷಗಳಾಗಿರುವುದರಿಂದ ಅವರನ್ನು ನೋಡಿ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ಮತ್ತೇನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**<u>ಪಾಟೀ ಸವಾಲು ಸ.ಸ.ಅ. ರವರಿಂದ</u>**

ದಿನಾಂಕ: 10.01.2014 ರಂದು ನಾನು 3 ನೇ ಸಲ ಸಿ.ಬಿ.ಐ. ಎಂ.ಬಿ.ನಗರ ಪೋಲಿಸ್ ಠಾಣೆಗೆ ಹಾಜರಾಗಿದ್ದೆ ಎಂದರೆ ಸರಿ. ಆ ದಿವಸದಂದೂ ಸಹ ಇಬ್ಬರು ಆರೋಪಿಗಳನ್ನು ಮತ್ತು ಕರಗಿಸಿದ ಬಂಗಾರವನ್ನು ತೋರಿಸಿರುತ್ತಾರೆ ಎಂದರೆ ಸರಿ. ಆ ದಿವಸದಂದು ಬ್ಯಾಂಕ್ ಕಳ್ಳತನ ಮಾಡಲು ಬಳಸಿದ ವಸ್ತುಗಳನ್ನು ಸಹ ತೋರಿಸಲಾಯಿತು ಎಂದರೆ ಸರಿ. ಆ ಸಮಯದಲ್ಲಿ ಆರೋಪಿಗಳ ಹೆಸರು ನಾವು ವಿಚಾರಿಸಿದೆವು, ಅವರ ಹೆಸರು ನನಗೆ ಈಗ ನೆನಪಿಲ್ಲ. ಒಟ್ಟು ನನಗೆ 11 ಜನ ಆರೋಪಿಗಳನ್ನು ತೋರಿಸಲಾಗಿತ್ತು, ಅವರನ್ನು ನಾನು ನೋಡಿದ್ದೇನೆ ಎಂದರೆ ಸರಿ. ಅವರ ಹೆಸರುಗಳು ಅಬ್ದುಲ್ ಖಾದರ, ಮೈನೋದ್ದೀನ್, ರುಕ್ಮೋದ್ದೀನ್, ಸಿದ್ದು@ ರೇವಣಸಿದ್ದ, ಮಹ್ಮದ ಖಾಲಿದ್ ತಂದೆ ಮಹ್ಮದ ಪಾಶಾಮಿಯಾ ಮುಲ್ಲಾ, ಮಹೆಬೂಬಸಾಬ @ ಕಾಲಾ, ಮಹ್ಮದಬಾಬಾ @ ಗೋರಿಬಾಬಾ, ಮಹಿಬೂಬ @ ಗೋರಾ ಮೆಹಬೂಬ, ಅಬ್ದುಲ ರಜಾಕ ತಂದೆ ಉಸ್ಮಾನಮಿಯಾ, ಚಾಂದ @ ಅಬ್ದುಲ ಪಾಶಾ, ವಿಜಯ @ ವಿಜಯಕುಮಾರ ಎಂದು ಇತ್ತು ಎಂದರೆ ನನಗೆ ಅವರ ಹೆಸರು ನನಗೆ ನೆನಪಿಲ್ಲ.

ದಿನಾಂಕ: 13.10.2012 ರಂದು ಸಾಯಂಕಾಲ 6.00 ಗಂಟೆಯಿಂದ 7.00 ಗಂಟೆವರೆಗೆ ಪೋಲಿಸರು ಚಾಸಾ-1 ರವರು ತೋರಿಸಿದಂತೆ ನನ್ನ ಸಮಕ್ಷಮ ಪಂಚನಾಮೆ ಕೈಗೊಂಡಿರುತ್ತಾರೆ ಎಂದರೆ ಸರಿ. ಒಂದು ಬಿದಿರಿನ ಬಡಿಗೆ, ಒಂದು ಕಬ್ಬಿಣದ ಹಿಡಿಕೆಯುಳ್ಳ ಕೊಯ್ತಾ, ಒಂದು ಒಡೆದ ಸಿ.ಸಿ. ಕ್ಯಾಮೆರಾ, ಕಬ್ಬಿಣದ ರಾಡು, ಒಂದು ಹಾರನ್, ಒಡೆದ ಗೋಡೆಯ ಚೂರುಗಳನ್ನು ನನ್ನ ಸಮಕ್ಷಮ ಜಪ್ತಿಪಡಿಸಿಕೊಂಡರು ಎಂದರೆ ಸರಿ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ1 ರಿಂದ 6 ಎಂದು ಈಗಾಗಲೇ ಗುರುತಿಸಲಾಗಿದೆ. ಎಲ್ಲಾ 11 ಆರೋಪಿಗಳನ್ನು ನಾನು ನೋಡಿದ ನೆನಪಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ನಾನು ಈಗ ನನಗೆ ಮುಖಚರ್ಯೆ ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**<u>ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ.ಐ.ಎಸ್. ವಕೀಲರಿಂದ</u>**

ನಾನು ಕಡಗಂಚಿ ಶಾಖೆಯಲ್ಲಿ ಕೆಲಸ ಮಾಡುವುದಕ್ಕಿಂತ ಮುಂಚೆ ಲಾಡವಂತಿ ಶಾಖೆಯಲ್ಲಿ ಕೆಲಸ ಮಾಡುತ್ತಿದೆ. ಲಾಡವಂತಿ ಶಾಖೆ ಸಹ ಚಿಕ್ಕ ಗ್ರಾಮ ಶಾಖೆ ಆಗಿತ್ತು. ನಾನು ಅಲ್ಲಿಂದ ವರ್ಗಾವಣೆ ಆಗಿ

ಬಂದಿರುತ್ತೇನೆ. ನಾನು ವ್ಯವಸ್ಥಾಪಕರ ಹತ್ತಿರ ಸಹಾಯಕನಾಗಿ ಕೆಲಸ ಮಾಡುತ್ತೇನೆ. ನಮ್ಮ ಶಾಖೆಯಲ್ಲಿ 6-7 ಜನ ಸಿಬ್ಬಂದಿ ಇದ್ದರು. ಅವರ ಹೆಸರು ಹೇಳಲು ಬರುತ್ತದೆ. ಪ್ರಲ್ಹಾದ ಎಸ್. ಪಾಟೀಲ್ ವ್ಯವಸ್ಥಾಪಕರು, ಲಾಜರ್ ಫಿಲ್ಡ್ ಆಫಿಸರ್, ಗೋವಿಂದ ದೇಶಪಾಂಡೆ ಫಿಲ್ಡ್ ಆಫಿಸರ್, ನಾನು, ಸೋಮನಾಥ ಸ್ವಾಮಿ ಸಹಾಯಕರು, ಪಾಲ್ ಸಹಾಯಕರು, ಚಂದ್ರಕಾಂತ ಡೋಣಿ ಪ್ಯೂನ್, ರವರು ಕೆಲಸ ಮಾಡುತ್ತಿದ್ದರು. 20-25 ನಿಮಿಷದಲ್ಲಿ ಪೋಲಿಸರು ಗುನ್ನೆ ಸ್ಥಳಕ್ಕೆ ಬಂದರು, ಜೊತೆಯಲ್ಲಿ ನಾಯಿಗಳನ್ನು ತಂದರು. ನಾನು ಶಾಖೆಯಲ್ಲೇ ಇದ್ದೆ. ಎಸ್.ಪಿ. ಮತ್ತು ಇನ್ನಿತರ ನರೋಣಾ ಪೋಲಿಸರು ಬಂದರು. ಠಾಣಾಧಿಕಾರಿಗಳು ಬಂದಿದ್ದರು ಅವರ ರಾಂಕ್ ಗೊತ್ತಾಗುವುದಿಲ್ಲ. ನಾನು ಆ ದಿನ ಪೋಲಿಸರು ಬಂದಾಗ ಗುನ್ನೆ ಸ್ಥಳದಲ್ಲಿ ಇರಲಿಲ್ಲ ಎಂಥರೆ ಹೇಳುತ್ತಿರುವುದು ಸುಳ್ಳು ಎಂದರೆ ಸರಿ ಅಲ್ಲ.

ಬ್ಯಾಂಕ್ ಒಳಗಡೆ ಪ್ರಥಮವಾಗಿ ವ್ಯವಸ್ಥಾಪಕರು ಹೋದರು. ಬ್ಯಾಂಕ್ ವ್ಯವಸ್ಥಾಪಕರು ಬರುವ ಪೂರ್ವದಲ್ಲಿ ಆ ಸ್ಥಳದಲ್ಲಿ ನಮ್ಮ ಬ್ಯಾಂಕ್ ಪ್ಯೂನ್ ಸ್ಥಳದಲ್ಲಿ ಇದ್ದನೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿ ಇರಲಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನ ಮುಖ್ಯ ದ್ವಾರದ ಕೀಲಿ ವ್ಯವಸ್ಥಾಪಕರ ಬಳಿ ಇರುತ್ತವೆ. ಆ ದಿನ ಅವರೇ ಕೀಲಿ ತೆಗೆದರು. ಕೀಲಿ ತೆಗೆದು ಒಳಗೆ ಸ್ವಲ್ಪ ಹೋದರು, ತಕ್ಷಣ ಹೊರ ಬಂದರು. ನಾವು ಹೊರಗೆ ಬಂದೆವು, ನಾವು ಆ ಸಮಯದಲ್ಲಿ ಏನೇನು ಹೋಗಿದೆ ಎಂದು ಯಾವುದೇ ದಾಖಲಾತಿಯನ್ನು ಪರೀಕ್ಷಿಸಲಿಲ್ಲ. ಆ ಸಮಯದಲ್ಲಿ ನಮ್ಮ ಬ್ಯಾಂಕಿ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಆ ಒಂದೇ ದಿನ ಮಾತ್ರ ಬ್ಯಾಂಕಿನ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ದಿನಾಂಕ: 14.10.2012 ರಂದು ಯಥಾಸ್ಥಿತಿ ಬ್ಯಾಂಕ್ ಕಾರ್ಯ ಚಟುವಟಿಕೆಗೊಂಡಿತ್ತು. ಸುಮಾರು ರೂ.46,40,000/- ಚಿಲ್ಲರೆ ಹಣ ಕಳ್ಳತನವಾಗಿತ್ತು. ಮತ್ತು ಒತ್ತೆ ಇಟ್ಟ 4500 ಗ್ರಾಂ. ಬಂಗಾರ ಸಂಪೂರ್ಣವಾಗಿ ಕಳ್ಳತನವಾಗಿತ್ತು ಎಂದು ನಾನು ಹೇಳಿದ್ದು ಅದು ಯಾವ ಆಧಾರದ ಮೇಲೆ ಹೇಳಿದ್ದೇನೆ ಎಂಥರೆ ದಿನಾಂಕ: 12.10.2012 ರ ಬ್ಯಾಂಕ್ ಅವಧಿ ಮುಕ್ತಾಯದಲ್ಲಿ ಬಂದ ಶಿಲ್ಕಿನ ಆಧಾರದ ಮೇಲೆ ಹೇಳುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ಎಂ.ಬಿ. ನಗರ ಪೋಲಿಸ್ ಠಾಣೆಗೆ ಮುಖ್ಯ ದ್ವಾರದ ದಿಕ್ಕು ನನಗೆ ಹೇಳಲು ಬರುವುದಿಲ್ಲ ನಾನು ನಮ್ಮ ಕಛೇರಿ ವಾಹನದಲ್ಲಿದೆ. ಎಂ.ಬಿ. ನಗರ ಪೋಲಿಸ್ ಠಾಣೆಯಲ್ಲಿ ಆರೋಪಿಗಳ ಸೆಲ್ ಯಾವ ಕಡೆ ಇದೆ ನನಗೆ ಗೊತ್ತಿಲ್ಲ. ಮೂರು ಸಲ ನಾನು ನನ್ನ ವ್ಯವಸ್ಥಾಪಕರೊಂದಿಗೆ ಎಂ.ಬಿ. ನಗರ ಪೋಲಿಸ್ ಠಾಣೆಗೆ ಹೋಗಿದ್ದೇನೆ. ನಾನು ಮೂರು ಸಲ ವ್ಯವಸ್ಥಾಪಕರೊಂದಿಗೆ ಎಂ.ಬಿ. ನಗರ ಪೋಲಿಸ್ ಠಾಣೆಗೆ ಹೋಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಕರಗಿಸಿದ ಗಟ್ಟಿ ಬಂಗಾರ ತೋರಿಸಿದ್ದು ಅದು ಎಷ್ಟು ತೂಕ ಮತ್ತು ಯಾವ ಗುಣಮಟ್ಟದ ಬಂಗಾರ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಅದು ಬಿಸ್ಕಿಟ್ ಆಕಾರದಲ್ಲಿ ಇರಲಿಲ್ಲ. ಮೂರು ಸಲ ನನಗೆ ಬಂಗಾರ ತೋರಿಸಿರುತ್ತಾರೆ. ನನಗೆ ಮೂರು ಸಲ ಬಂಗಾರ ತೋರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಯಾವ ಯಾವ ತಾರೀಖಿನಂದ ಎಂ.ಬಿ. ನಗರ

ಪೋಲಿಸ್ ಠಾಣೆಗೆ ಹೋಗಿದ್ದೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಎಂ.ಬಿ. ನಗರ ಠಾಣೆಗೆ ಹೋಗಿರುತ್ತೇನೆ ಎಂದು ಹೇಳುತ್ತಿರುವುದು ಮತ್ತು ಅಲ್ಲಿ ನನಗೆ ಗಟ್ಟಿ ಬಂಗಾರವನ್ನು ತೋರಿಸುತ್ತಾರೆ ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿ ಅಲ್ಲ. ದಿನಾಂಕ: 12, 13 ಮತ್ತು 14.10.2012 ರಂದು ನಾನು ಬ್ಯಾಂಕಿಗೆ ಬಂದಿರುತ್ತೇನೆ ಎಂದು ಹೇಳುತ್ತಿರುವುದು ಸುಳ್ಳು ಎಂಧರೆ ಸರಿ ಅಲ್ಲ. ನಮ್ಮ ಹಾಜರಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಈ ಪ್ರಕರಣದ ಯಾವುದೆ ಮಾಹಿತಿ ನನಗೆ ಇರುವುದಿಲ್ಲವಾದರೂ ನನ್ನ ಮೇಲಾಧಿಕಾರಿಗಳಾದ ವ್ಯವಸ್ಥಾಪಕರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿಗೆ ಈಗ ನಿಪಿ-1 ರಲ್ಲಿನ ಪತ್ರದ ಒಕ್ಕಣೆಯನ್ನು ಓದಿ ಹೇಳಲಾಗಿ ಅದರಲ್ಲಿ ದಿನಾಂಕ: 12.10.2012 ರಂದು ನಮ್ಮ ಬ್ಯಾಂಕಿನ ಹಿಂದಿನ ಬಾಗಿಲನ್ನು ಮತ್ತು ಸ್ಟ್ರಾಂಗ್ ರೂಮನ ಗೋಡೆಯನ್ನು ಒಡೆದಿರುತ್ತಾರೆ ಎಂದು ಬರೆಸಲಾಗಿದೆ, ನಾನು ಹೇಳಿದ್ದು ಸರಿಯೇ ಅಥವಾ ನಿಪಿ-1 ರಲ್ಲಿನ ಒಕ್ಕಣೆಯು ಸರಿಯೇ ಎಂದು ಕೇಳಲಾಗಿ ಸಾಕ್ಷಿಯು ಎರಡೂ ಸರಿ ಎಂದು ನುಡಿಯುತ್ತಾರೆ. ನಮ್ಮ ಬ್ಯಾಂಕಿನ ಕಟ್ಟಡದ ಅಂದಾಜು ವಿಸ್ತೀರ್ಣ 80* 100 ಅಡಿ ಇರುತ್ತದೆ. ಅದರಲ್ಲಿ ಎಷ್ಟು ರೂಮುಗಳಿವೆ ಎಂದು ನನಗೆ ಹೇಳಲು ಬರುತ್ತದೆ. ಯಾವ ರೂಮಿನ ದಿಕ್ಕು ಯಾವ ಕಡೆಗೆ ಇದೆ ಎಂದು ನನಗೆ ಹೇಳಲು ಬರುತ್ತದೆ. ಸ್ಟ್ರಾಂಗ್ ರೂಮು ಪಶ್ಚಿಮ ದಿಕ್ಕಿಗೆ ಇದೆ. ವ್ಯವಸ್ಥಾಪಕರ ಕ್ಯಾಬಿನ್ ಉತ್ತರ ದಿಕ್ಕಿಗೆ ಇದೆ. ಸ್ಟಾಫ್ ಡೈನಿಂಗ್ ಹಾಲ್ ಪೂರ್ವ ದಿಕ್ಕಿಗೆ ಇದೆ. ರೆಕಾರ್ಡ ರೂಮ ಮತ್ತು ಕಂಪ್ಯೂಟರ್ ರೂಮ್ ಪೂರ್ವ ದಿಕ್ಕಿಗೆ ಇದೆ. ಡೈನಿಂಗ್ ಹಾಲ್ ಮತ್ತು ಸೇಫ್ ಲಾಕರನ ಅಂತರ ಎಷ್ಟಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಡೈನಿಂಗ್ ಹಾಲಗೂ ಮತ್ತು ಸೇಫ ಲಾಕರ ನಡುವೆ ಸಾಮೂಹಿಕ ಗೋಡೆ ಇದೆ. ಸಾಕ್ಷಿಗೆ ಈಗ ಪಂಚನಾಮೆಯಲ್ಲಿನ ನಕಾಶೆಯನ್ನು ತೋರಿಸಲಾಗಿ ಅದು ನಮ್ಮ ಬ್ಯಾಂಕಿನ ನಕಾಶೆ ಎಂದು ನುಡಿಯುತ್ತಾರೆ.

ನಾವಿದ್ದಾಗ ನಮ್ಮ ಶಾಖೆಯಲ್ಲಿ ಒಟ್ಟು ಮೂರು ಕೌಂಟರಗಳು ಇದ್ದವು. ಪಂಚನಾಮೆಯಲ್ಲಿ ನಾಲ್ಕು ಕೌಂಟರ್ ಇವೆ ಎಂದರೆ ಸರಿ ಅಲ್ಲ, ಅಲ್ಲಿ ಮೂರು ಕೌಂಟರುಗಳು ಇವೆ. ಘಟನೆ ನಂತರದ ದಿನದಂದು ನಾನು ಬೆಳಿಗ್ಗೆ 9.45 ರಿಂದ 6.30 ಗಂಟೆ ತನಕ ಶಾಖೆಯಲ್ಲಿದ್ದೆ. ಪೋಲಿಸರು ತನಿಖೆಯನ್ನು ದಿನಾಂಕ: 13.10.2012 ರಂದು ಬೆಳಿಗ್ಗೆ 10.00 ಗಂಟೆಯಿಂದ ತನಿಖೆ ಕೈಗೊಂಡಿರುತ್ತಾರೆ. ನಾನು ಹೇಳಿದಂತೆ ಸುಮಾರು ರೂ.46,40,000/- ಚಿಲ್ಲರೆ ಹಣ ಕಳ್ಳತನವಾಗಿತ್ತು. ಮತ್ತು ಒತ್ತೆ ಇಟ್ಟ 4500 ಗ್ರಾಂ. ಬಂಗಾರ ಸಂಪೂರ್ಣವಾಗಿ ಕಳ್ಳತನವಾದ ಬಗ್ಗೆ ನ್ಯಾಯಾಲಯಕ್ಕೆದಾಖಲೆ ಸಲ್ಲಿಸಿಲ್ಲ ಎಂದರೆ ಸರಿ ಅಲ್ಲ.

**<u>ಪಾಟೀ ಸವಾಲು 2 ಮತ್ತು 4 ನೇ ಆರೋಪಿ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ</u>**

ನಮ್ಮ ಸ್ಟ್ರಾಂಗ್ ರೂಮ್ ಮತ್ತು ಹಣ ಇಡುವ ಸ್ಥಳ ನಮ್ಮ ಬ್ಯಾಂಕಿನವರಿಗೆ ಮಾತ್ರ ಗೊತ್ತಿರುತ್ತವೆ, ಬೇರೆಯವರಿಗೆ ಗೊತ್ತಿರುವುದಿಲ್ಲ ಎಂದರ ಸರಿ. ಸ್ಟ್ರಾಂಗ್ ರೂಮ್ ಹತ್ತಿರ ಹೋದಾಗ ಸೈರನ್ ಆಗುತ್ತದೆ ಎಂಧರೆ ಸರಿ. ಕಳ್ಳತನವಾದ ಹಣದ ಮುಖಬೆಲೆ ಹೇಳಲು ಬರುವುದಿಲ್ಲ. ಬಂಗಾರ ಆಭರಣ ರೂಪದಲ್ಲಿತ್ತು, ಕರಗಿಸಿದ ಗಟ್ಟಿ ಬಂಗಾರದ ಆಕಾರದಲ್ಲಿ ಸಿಕ್ಕಿರುತ್ತದೆ. ಪಂಚನಾಮೆ ಬರೆದು ನಮ್ಮ ಸಹಿ ಪಡೆಯಲು ಪೋಲಿಸರು

ಒಂದೆರಡು ದಿವಸಗಳ ನಂತರ ಬಂದಿರಬಹುದು. ಪೋಲಿಸರು ನನ್ನ ಸಹಿಯನ್ನು ಎಷ್ಟು ಸಲ ಪಡೆದಿದ್ದಾರೆ ಎಂದು ನನಗೆ ನೆನಪಿಲ್ಲ. ನಾನು ನನ್ನ ಸಹಿಯನ್ನು ನಮ್ಮ ಬ್ಯಾಂಕನಲ್ಲಿ ಮಾಡಿರುತ್ತೇನೆ. ದಿನಾಮಕ: 13.10.2012 ರಂದು ಬ್ಯಾಂಕ್ ಆವರಣದಲ್ಲಿ ಪೋಲಿಸರು ಬಂದಾಗ ನಾವು ಮತ್ತು ನಮ್ಮ ಬ್ಯಾಂಕಿನ ಸ್ಟಾಫ್ ಮಾತ್ರ ಇದ್ದರು, ಸಾರ್ವಜನಿಕರು ಇರಲಿಲ್ಲ. ನಮ್ಮ ಬ್ಯಾಂಕಿನ ಕಟ್ಟಡವು ಕಲ್ಲಿನಿಂದ ಕಟ್ಟಿರುವ ಕಟ್ಟಡವಾಗಿದೆ. ಸಾಮಾನ್ಯವಾಗಿ ಒಂದು ಕಲ್ಲಿನ ಕಟ್ಟಡದ ಒಂದು ಕಲ್ಲನ್ನು ತೆಗೆದರು ಉಳಿದ ಎಲ್ಲಾ ಕಲ್ಲುಗಳು ಉರುಳಿ ಬೀಳುತ್ತವೆ ಎಂದರೆ ಸರಿ. ನಾವು ನಮ್ಮ ಡೈನಿಂಗ್ ಹಾಲಿಗೂ ಸಹ ಕೀಲಿ ಹಾಕುತ್ತೇವೆ. ಆದರ ಕೀಲಿ ಆ ದಿನ ಮುರಿದಿತ್ತು, ಪೋಲಿಸರು ಸದರಿ ಕೀಲಿಯನ್ನು ವಶಪಡಿಸಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯದ ಸಮಕ್ಷಮ ಇರುವ ನಾಲ್ಕು ಜನ ಆರೋಪಿಗಳನ್ನು ಈ ದಿನವೇ ನೋಡಿರುತ್ತೇನೆ ಎಂದರೆ ಸರಿ, ಮತ್ತೆ ಬೇರೆ ಎಲ್ಲಿಯೂ ನಾನು ಅವರನ್ನು ನೋಡಿರುವುದಿಲ್ಲ.

ಚಂದ್ರಕಾಂತ ಪ್ಯೂನ್ ಆ ದಿನ ಸಹ ಬ್ಯಾಂಕಿನಲ್ಲಿದ್ದ. ಆತನನ್ನು ಪೋಲಿಸರು ವಿಚಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿ ಅಲ್ಲ. ನನಗೆ ಪೋಲಿಸರು ಎಲ್ಲಯೂ ಕರೆದಿಲ್ಲ ಎಂದರೆ ಸರಿ ಅಲ್ಲ, ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಮ್ಮ ಶಾಖೆಯಲ್ಲಿ ಈ ಘಟನೆ ಆಗುವ ಮುಂಚೆ ನಾಲ್ಕು ಸಲ ಕಳ್ಳತನ ಆಗಿದೆ. ಕಳ್ಳತನ ಆಗುತ್ತಿರುವ ಬಗ್ಗೆ ಹೆಚ್ಚಿನ ಸೆಕ್ಯುರಿಟಿ ಕೇಳಿ ನಾವು ವರದಿ ಸಲ್ಲಿಸಿರುತ್ತೇವೆ. ಮೇಲಾಧಿಕಾರಿಗಳ ಕ್ರಮದ ಬಗ್ಗೆ ನನ್ನ ವ್ಯವಸ್ಥಾಪಕರಿಗೆ ಗೊತ್ತು ನನಗೆ ಗೊತ್ತಿಲ್ಲ. ಆರೋಪಿಗಳು ಯಾವುದೇ ಕಳ್ಳತನ ಮಾಡಿದ್ದರೂ ಅವರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ**- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ,ಆಳಂದ